ಆ) ಹಾಗಿದ್ದಲ್ಲಿ, ಈ ವಾಣಿಜ್ಯ ಸಂಕೀರ್ಣಗಳ ಪ್ರದೇಶವನ್ನು ಖಾಸಗಿ ಗುತ್ತಿಗೆದಾರರಿಗೆ ನಿರ್ವಹಣೆಗಾಗಿ ವಹಿಸಲು ಸರ್ಕಾರದಲ್ಲಿ ಯಾವುದೇ ಪ್ರಸ್ತಾಪವಿದೆಯೇ,

ಇ) ಇಲ್ಲದಿದ್ದಲ್ಲಿ ವಾಣಿಜ್ಯ ಸಂಕೀರ್ಣಗಳನ್ನು ಉತ್ತಮಗೊಳಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮವೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಮತ್ತು ಆ) ಪ್ರಾಧಿಕಾರದ ವಾಣಿಜ್ಯ ಸಂಕೀರ್ಣಗಳ ನಿರ್ವಹಣೆ ಹಾಗೂ ಉಸ್ತುವಾರಿಗಳನ್ನು ಟೆಂಡರ್‌ಗಳನ್ನು ಆಹ್ವಾನಿಸುವ ಮೂಲಕ ಖಾಸಗಿ ಗುತ್ತಿಗೆದಾರರಿಗೆ ವಹಿಸಲಾಗಿದೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವಾಣಿಜ್ಯ ಸಂಕೀರ್ಣಗಳನ್ನು ಸ್ವಚ್ಛವಾಗಿಡಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ

ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕೆಲವು ಹಳೆಯ ಕಟ್ಟಡಗಳಾಗಿರುವ ದೊಮ್ಮಲೂರು ಹಾಗೂ ಆಸ್ಟಿನ್ ಟೌನ್ ವಾಣಿಜ್ಯ ಸಂಕೀರ್ಣಗಳನ್ನು ನವೀಕರಿಸಲು ಉದ್ದೇಶಿಸಿದೆ

885(735) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೇದೆಗಳು ದಿನಕ್ಕೆ 8 ಗಂಟೆಗಳ ಕಾಲ ಕೆಲಸ ಮಾಡಬೇಕೆಂದಿದ್ದರೂ ಅವರು ದಿನಕ್ಕೆ 12 ಗಂಟೆಗಳಿಗಿಂತ ಹೆಚ್ಚಿಗೆ ಕರ್ತವ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಖಾಲಿ ಹುದ್ದೆಗಳನ್ನು ತುಂಬಲು ಮತ್ತು ನೇಮಕಾತಿ ಮಾಡಲು ಸರ್ಕಾರದ ಕ್ರಮವೇನು,

ಇ) ಕೇವಲ ಶೇಕಡಾ 30ರಷ್ಟು ಪೊಲೀಸ್ ಪೇದೆಗಳಿಗೆ ಮಾತ್ರ ವಸತಿ ಗೃಹ ಒದಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಮನೆಗಳನ್ನು ಕಟ್ಟಿಸಿ ವಸತಿ ಗೃಹ ಸೌಲಭ್ಯ ವಂಚಿತರಿಗೆ ನೀಡಲು ಸರ್ಕಾರ ಕ್ರಮ ಕೈಗೊಂಡಿದೆಯೇ,

ಈ) ಕರ್ತವ್ಯದ ಸಮಯದಲ್ಲಿ ಕೊಲ್ಲಲ್ಪಟ್ಟ ಅಥವಾ ಗಾಯಗೊಂಡ ಪೊಲೀಸ್ ಸಿಬ್ಬಂದಿಗಳಿಗೆ ವಿಶೇಷ ನಿಧಿಯನ್ನು ಸ್ಥಾಪಿಸಲು ಸರ್ಕಾರದಲ್ಲಿ ಯಾವುದಾದರೂ ಪ್ರಸ್ತಾವನೆ ಇದೆಯೇ?

ಶ್ರೀ ಎಂ ಪಿ ಪ್ರಕಾಶ್ (ಗೃಹ ಮಂತ್ರಿಗಳು)

ಅ) ಹೌದು

ಆ) ಪೊಲೀಸ್ ಇಲಾಖೆಯಲ್ಲಿ ಎಲ್ಲಾ ಘಟಕಗಳಲ್ಲಿ ಖಾಲಿ ಇರುವ ಈ ಕೆಳಕಂಡ ಸಂಖ್ಯೆಯ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳನ್ನು ತುಂಬಲು ಎ ಡಿ ಜಿ ಪಿ (ನೇಮಕಾತಿ ಮತ್ತು ತರಬೇತಿ) ಬೆಂಗಳೂರುರವರು ಅಧಿಸೂಚನೆ ಸಂಖ್ಯೆ 17/ನೇಮಕಾತಿ/2006–07, ದಿನಾಂಕ 17–8–2006ರಲ್ಲಿ ಅರ್ಜಿಯನ್ನು ಕರೆದಿರುತ್ತಾರೆ

1)	ಸಿಪಿಸಿ	3,497
2)	ಮಹಿಳಾ ಪಿಸಿ	387
3)	ಎಪಿಸಿ (ಸಿಎಆರ್/ಡಿಎಆರ್)	433
	ಒಟ್ಟು	4,317

ನೇಮಕಾತಿ ಪ್ರಕ್ರಿಯೆಯನ್ನು ಕೈಗೊಂಡಿದ್ದು ಕೆಲವು ಘಟಕಗಳಿಂದ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ ಕೆಲವು ಘಟಕಗಳಲ್ಲಿ ನೇಮಕಾತಿ ಪ್ರಕ್ರಿಯೆಯು ಮೂರ್ಣಗೊಂಡಿದ್ದು ಆಯ್ಕೆ ಪಟ್ಟಿಯನ್ನು ಪ್ರಕಟಿನಬೇಕಾಗಿದೆ ಆಯ್ಕೆ ಪಟ್ಟಿ ಪ್ರಕಟಣೆಯ ನಂತರ ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ಕ್ರಮಕೈಗೊಳ್ಳಲಾಗುವುದು

ಇ) ರಾಜ್ಯದಲ್ಲಿ ಒಟ್ಟು 48 347 ಪೊಲೀಸ್ ಕಾನ್ಸ್‌ಟೇಬಲ್‌ಗಳಿದ್ದು, ಈ ಪೈಕಿ 24,775 ಪೊಲೀಸ್ ಸಿಬ್ಬಂದಿಯವರಿಗೆ ವಸತಿ ಗೃಹಗಳನ್ನು ನೀಡಲಾಗಿದೆ ಇದು 50% ರಷ್ಟು ವಸತಿ ಗೃಹಗಳನ್ನು ನೀಡಿದಂತಾಗುತ್ತದೆ

ತ್ವರಿತ ವಸತಿ ಯೋಜನೆ–2ರಡಿಯಲ್ಲಿ ರಾಜ್ಯದಲ್ಲಿ ಪೊಲೀಸರಿಗಾಗಿ ಒಟ್ಟು 5,000 ವಸತಿ ಗೃಹಗಳನ್ನು ನಿರ್ಮಾಣ ಮಾಡಲು ಮಂಜೂರಾತಿ ನೀಡಿದ್ದು ಈ ಪೈಕಿ ಈಗಾಗಲೇ 2,388 ವಸತಿ ಗೃಹಗಳನ್ನು ನಿರ್ಮಿಸಿದ್ದು, ಉಳಿದ 2,582 ವಸತಿ ಗೃಹಗಳು ನಿರ್ಮಾಣದ ಹಂತದಲ್ಲಿವೆ 30 ವಸತಿ ಗೃಹಗಳ ನಿರ್ಮಾಣ ಟೆಂಡರ್ ಪ್ರಕ್ರಿಯೆಯಲ್ಲಿವೆ ಉಳಿದ ಸಿಬ್ಬಂದಿಯವರಿಗೆ ಅನುದಾನದ ಲಭ್ಯತೆಯ ಮೇರೆಗೆ ಹಂತ ಹಂತವಾಗಿ ವಸತಿ ಗೃಹಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು

ಈ) ಕರ್ತವ್ಯದ ಸಮಯದಲ್ಲಿ ಕೊಲ್ಲಲ್ಪಟ್ಟ ಅಥವಾ ಗಾಯಗೊಂಡ ಪೊಲೀಸ್ ಸಿಬ್ಬಂದಿಗಳಿಗೆ ವಿಶೇಷ ನಿಧಿಯನ್ನು ಸ್ಥಾಪಿಸಲು ಸರ್ಕಾರದ ಹಂತದಲ್ಲಿ ಯಾವುದೇ ಪ್ರಸ್ತಾವನೆಯು ಇರುವುದಿಲ್ಲ

ಆದರೆ ಇಂತಹ ಸಿಬ್ಬಂದಿ / ಅಧಿಕಾರಿ ಮತ್ತು ಅವರ ವಾರಸುದಾರರಿಗೆ ಈ ಕೆಳಕಂಡಂತೆ ಧನ ಸಹಾಯವನ್ನು ಮಂಜೂರಿಸಲು ಸರ್ಕಾರವು ಅವಕಾಶವನ್ನು ಕಲ್ಪಿಸಿಕೊಟ್ಟಿದೆ

1) ಸರ್ಕಾರದ ಆದೇಶ ಸಂ ಒನಾಇ/353/ಪೊಸಿಇ/2001, ದಿನಾಂಕ 5-8-2003ರಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಮತ್ತು ಅಪರಾಧಗಳನ್ನು ತಡೆಗಟ್ಟುವ ಸಂದರ್ಭದಲ್ಲಿ ಮರಣ ಹೊಂದಿದ ಅಥವಾ ಗಾಯಗೊಂಡ ಸಿಬ್ಬಂದಿಗಳಿಗೆ ಪರಿಹಾರ

ಎ) ಮರಣ ಹೊಂದಿದಲ್ಲಿ ರೂ 5,00,000/-

ಬಿ) ಶಾಶ್ವತ ಅಂಗವಿಕಲತೆ ಉಂಟಾದಲ್ಲಿ ರೂ 1,00,000/-

ಸಿ) ಗುರುತರ ಗಾಯಗೊಂಡಲ್ಲಿ ರೂ 20,000/-

ಡಿ) ಸಾಧಾರಣ ಗಾಯಗೊಂಡಲ್ಲಿ ರೂ 10,000/-

2) ಸರ್ಕಾರದ ಆದೇಶ ಸಂ ಒಇ/65/ಪೊಸಿಇ/2005, ದಿನಾಂಕ 16-2-2005ರಲ್ಲಿ ನಕ್ಸಲೀಯರ ದಾಳಿಯಲ್ಲಿ ಮೃತರಾದ / ಗಾಯಗೊಂಡಲ್ಲಿ

ಎ) ಮರಣ ಹೊಂದಿದಲ್ಲಿ ರೂ 5,00,000/-

ಬಿ) ಗುಂಡೇಟಿನಿಂದ ಗಾಯಗೊಂಡಲ್ಲಿ ರೂ 1,00,000/-

ಸಿ) ಇತರೆ ರೀತಿಯ ಗಾಯಗಳಿಗೆ ರೂ 10,000/-

ಡಿ) ಅಂತಿಮವಾಗಿ ಪಡೆದ ವೇತನವನ್ನು ಅವರು ಮೃತಪಟ್ಟ ದಿನಾಂಕದಿಂದ ವಯೋನಿವೃತ್ತರಾಗುತ್ತಿದ್ದ ದಿನಾಂಕದವರೆಗೆ ನೀಡಲಾಗುವುದು ನಂತರ ಕುಟುಂಬಕ್ಕೆ ನಿಯಮಗಳ ಪ್ರಕಾರ ಲಭ್ಯವಾಗುವ ಕುಟುಂಬ ವಿಶ್ರಾಂತಿ ವೇತನವನ್ನು ಮಂಜೂರಿಸಲಾಗುವುದು

ಇ) ಮರಣ ದಿನಾಂಕದಂದು ಪಡೆಯುತ್ತಿದ್ದ ಮನೆ ಬಾಡಿಗೆ ಭತ್ಯೆಯನ್ನು ವಯೋ ನಿವೃತ್ತಿಯ ಅವಧಿಯವರೆಗೆ ನೀಡುವುದು

3) ಸರ್ಕಾರದ ಆದೇಶ ಸಂಖ್ಯೆ ಒನಾಇ/119/ಪೊಸಿಇ/2003, ದಿನಾಂಕ 27-1-04 ಮತ್ತು 13-8-04ರಲ್ಲಿ ಕರ್ತವ್ಯದ ಸಮಯದಲ್ಲಿ ಆಕಸ್ಮಿಕ ಮರಣ ಹೊಂದಿದ ಪೊಲೀಸ್ ಸಿಬ್ಬಂದಿಗಳಾದ ಹೆಚ್‌ಸಿ, ಪಿಸಿ ಮತ್ತು ವಾಲೋವರ್, ಸಿಬ್ಬಂದಿಗಳ ವಾರಸುದಾರರಿಗೆ ತಲಾ ರೂ 3,00,000/- ಗಳ ಪರಿಹಾರವನ್ನು ವಿಮಾ ಕಂಪನಿಯ ಮೂಲಕ ಮಂಜೂರಿಸಿ ಪಾವತಿಸಲಾಗುವುದು

887(1085) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗುರುತಿಸಲಾಗಿರುವ ಪಾರಂಪರಿಕ ಸ್ಮಾರಕಗಳ ಸಂಖ್ಯೆ ಎಷ್ಟು,